ಕರ್ನಾಟಕ ವಿಧಾನ ಪರಿಷತ್ತು

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1033
02.	ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ರಘುನಾಥ್ ರಾವ್ ಮಲ್ಕಾಪೂರೆ. (ವಿಧಾನ ಸಭೆಯಿಂದ ಚುನಾಯಿತರಾದವರು)
03.	ಉತ್ತರಿಸುವ ದಿನಾಂಕ	:	21-09-2021
04.	ಉತ್ತರಿಸುವ ಸಚಿವರು.	:	ಮಾನ್ಯ ಗೃಹ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಶಿಶುಗಳ ಕಳ್ಳಸಾಗಾಣಿ ಮತ್ತು ಮಾರಾಟ ಜಾಲ ಸಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಳೆದ 3 ವರ್ಷದಿಂದ ಎಷ್ಟು ಪ್ರಕರಣಗಳು ದಾಖಲಾಗಿವೆ; (ಜಿಲ್ಲಾವಾರು ಸ್ಪಷ್ಟ ಮಾಹಿತಿ ನೀಡುವುದು)</td><td rowspan="2">ಬಂದಿರುತ್ತದೆ.
ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಶಿಶುಗಳ ಕಳ್ಳ ಸಾಗಾಣಿ, ಮಾರಾಟ ಮಾಡಲಾಗಿರುವ ಶಿಶುಗಳು ಮತ್ತು ಮಾರಾಟ ಮಾಡಲ್ಪಟ್ಟ ಶಿಶುಗಳ ಪೈಕಿ ರಕ್ಷಿಸಲಾಗಿರುವ ಶಿಶುಗಳ ಸಂಖ್ಯೆಗಳ ಅಂಕಿ ಅಂಶಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ಈ ಪ್ರಕರಣಗಳಲ್ಲಿ ಒಟ್ಟು ಎಷ್ಟು ಶಿಶುಗಳನ್ನು ಮಾರಾಟ ಮಾಡಲಾಗಿದೆ ; ಮಾರಾಟ ಮಾಡಲ್ಪಟ್ಟ ಎಷ್ಟು ಶಿಶುಗಳನ್ನು ರಕ್ಷಿಸಲಾಗಿದೆ ; (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು)</td></tr>
<tr><td>ಇ</td><td>ಈ ಜಾಲದ ರುವಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಒಟ್ಟು ಎಷ್ಟು ಜನರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ; (ಮಾಹಿತಿ ನೀಡುವುದು)</td><td>ಶಿಶು ಮಾರಾಟದಲ್ಲಿ ತೊಡಗಿರುವವರ ವಿರುದ್ಧ ಕಾನೂನು ರೀತ್ಯಾ ಪ್ರಕರಣಗಳನ್ನು ದಾಖಲಿಸಲಾಗಿದೆ.
ಸದರಿ ಪ್ರಕರಣಗಳಲ್ಲಿ ಬಂಧಿಸಲಾಗಿರುವ ಆರೋಪಿಗಳ ಸಂಖ್ಯೆಯು ಈ ಕೆಳಕಂಡಂತಿದೆ.
<table><tr><th>ವರ್ಷ</th><th>2018</th><th>2019</th><th>2020</th><th>2021(ಆಗಸ್ಟ್)</th></tr><tr><td>ಬಂಧಿಸಲಾಗಿರುವ ಆರೋಪಿಗಳ ಸಂಖ್ಯೆ</td><td>29</td><td>17</td><td>36</td><td>46</td></tr></table></td></tr>
<tr><td>ಈ</td><td>ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಶಿಶುಗಳ ಮಾರಾಟ ಪ್ರಕರಣಗಳನ್ನು ತಡೆಯಲು ಕೈಗೊಂಡಿರುವ ಮಹತ್ವದ ಕ್ರಮಗಳೇನು ; ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?</td><td><u>ಶಿಶು ಮಾರಾಟ ಪ್ರಕರಣಗಳನ್ನು/ಅಕ್ರಮ ಮಾನವ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.</u>
➢ ಸರ್ಕಾರವು ಮಾನವ ಕಳ್ಳಸಾಗಣಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ 2019-20ನೇ ಸಾಲಿನಲ್ಲಿ ರೂ 3.88 ಕೋಟಿ ಅನುದಾನವನ್ನು ನಿರ್ಭಯ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಿದ್ದು, ಸದರಿ ಅನುದಾನದಲ್ಲಿ ರಾಜ್ಯದ 30 ಮಹಿಳಾ ಪೊಲೀಸ್ ಠಾಣೆಗಳಲ್ಲಿ ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕಗಳನ್ನು ಸ್ಥಾಪಿಸಲಾಗಿದೆ.</td></tr>
</table>

		2020-21ನೇ ಸಾಲಿಗೆ ರೂ 37.90 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಸದರಿ ಅನುದಾನದಲ್ಲಿ 5 ಮಹಿಳಾ ಪೊಲೀಸ್ ಠಾಣೆಗಳಲ್ಲಿ ಮಾನವ ಕಳ್ಳಸಾಗಣಿಕೆ ನಿಷೇಧ ಘಟಕಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ➢ ಪ್ರತಿ ಮಾನವ ಕಳ್ಳಸಾಗಾಣಿಕೆ ಘಟಕಗಳಿಗೆ ಹಿರಿಯ ಮತ್ತು ಕಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳನ್ನು ನಿಯೋಜಿಸಿ, ಅವರುಗಳಿಗೆ ತರಬೇತಿ ನೀಡಲಾಗಿರುತ್ತದೆ. ➢ ಮಾನವ ಸಾಗಣಿಕೆ ಮಾಡುವವರ ವಿರುದ್ದ ಬಾತ್ಮಿ ಸಂಗ್ರಹಿಸಿ ತಪ್ಪಿತಸ್ಥರ ವಿರುದ್ದ ಕಲಂ.370, 370[ಎ] ಐಪಿಸಿ ಮತ್ತು ಇಮ್‌ಮೋರಲ್ ಟ್ರಾಫಿಕಿಂಗ್ ಪ್ರಿವೆನ್‌ಷನ್ ಆಕ್ಟ್ (ಐ.ಟಿ.ಪಿ.ಎ) ಹಾಗೂ ಸಂಬಂಧಪಟ್ಟ ಇತರೆ ಕಾಯ್ದೆ ಮತ್ತು ಕಲಂ ರೀತ್ಯಾ ಪ್ರಕರಣಗಳನ್ನು ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ➢ ಮಾನವ ಕಳ್ಳಸಾಗಾಣಿಕೆಯ ಪ್ರಕರಣಗಳ ತನಿಖೆಯನ್ನು ಸಮರ್ಥವಾಗಿ ನಿರ್ವಹಿಸಲು ತನಿಖಾಧಿಕಾರಿಗಳಿಗಾಗಿ ನಿರ್ಧಿಷ್ಟ ಕಾರ್ಯವಿಧಾನವನ್ನು ಸಿದ್ದಪಡಿಸಿ, ಸ್ಥಾನಿ ಆದೇಶದ ಮೂಲಕ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ. ➢ ಅಪರಿಚಿತ ವ್ಯಕ್ತಿಗಳ ಬಳಿ ಸಂಪರ್ಕ ಇಟ್ಟುಕೊಳ್ಳದಂತೆ, ಆಸೆ ಆಮಿಷಗಳನ್ನು ಒಡ್ಡುವ ಆಸಾಮಿಗಳ ಬಗ್ಗೆ ಮಹಿಳೆಯರಿಗೆ & ಮಕ್ಕಳಿಗೆ ಹಾಗೂ ಗ್ರಾಮಗಳಲ್ಲಿ ಸೂಕ್ತ ತಿಳುವಳಿಕೆಗಳನ್ನು ನೀಡಲಾಗಿರುತ್ತದೆ. ➢ ಅಪರಾಧ ಚಟುವಟಿಕೆಗಳಲ್ಲಿ ಹಾಗೂ ಮಕ್ಕಳ ಭಿಕ್ಷಾಟನೆಯಲ್ಲಿ ತೊಡಗಿಸಿರುವಂತಹ ಅಪರಿಚಿತ ವ್ಯಕ್ತಿಗಳು ಕಂಡು ಬಂದಲ್ಲಿ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿರುತ್ತದೆ. ➢ ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ವಿವಿಧ ಹೆಸರುಗಳಡಿಯಲ್ಲಿ ವಿಶೇಷ ಪಡೆಗಳನ್ನು ರಚಿಸಿದ್ದು, ಸದರಿ ಪಡೆಯು ನಗರದ ಮತ್ತು ಜಿಲ್ಲಾ ವ್ಯಾಪ್ತಿಯ ಶಾಲಾ- ಕಾಲೇಜು, ಪಾರ್ಕ್‌ಗಳು, ಹಾಸ್ಟೆಲ್, ಪಿಜಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮತ್ತು ಇತರೆ ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳು ಓಡಾಡುವ ಸ್ಥಳಗಳಲ್ಲಿ ಪ್ರತಿದಿನ ಗಸ್ತು ಮಾಡುತ್ತಾ ಅರಿವು ಮೂಡಿಸಲಾಗುತ್ತಿದೆ. ➢ ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾಣ ನಿಲ್ದಾಣ ಮತ್ತು ಜನನಿಬಿಡ ಸ್ಥಳಗಳಲ್ಲಿ ಹಾಗೂ ಪ್ರಮುಖ ಸ್ಥಳಗಳನ್ನು ಗುರುತಿಸಿ ಸಿಸಿ ಟಿ.ವಿ ಕ್ಯಾಮರಾಗಳನ್ನು ಅಳವಡಿಸಿದ್ದು ಅವುಗಳ ಸಹಾಯದಿಂದ ಮಹಿಳೆಯರ

		ಮತ್ತು ಮಕ್ಕಳ ಸಾಗಾಟ ಮಾಡುವವರ ಮೇಲೆ ನಿಗಾವಹಿಸಲಾಗಿದೆ. ➢ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬೀಟ್ ಸಿಬ್ಬಂದಿಗಳ ಮೂಲಕ ಹಾಗೂ ಬೀಟ್ ಗ್ರೂಪ್ ಸದಸ್ಯರ ಮೂಲಕ ಮಾನವ ಕಳ್ಳಸಾಗಾಣಿಕೆಗೆ ಸಂಬಂಧಿಸಿದಂತೆ ಮುಂಚಿತವಾಗಿ ಮಾಹಿತಿ ಸಂಗ್ರಹಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ➢ ಚಾಲ್ತಿಯಲ್ಲಿರುವ ಸಾಮಾಜಿಕ ಜಾಲತಾಣಗಳಾದ ಬ್ಲಾಗ್, ಟ್ವಿಟರ್, ಫೇಸ್ ಬುಕ್, ಪೊಲೀಸ್ ವೆಬ್ ಸೈಟ್ ಹಾಗೂ ಇತರೆ ಜಾಲತಾಣಗಳ ಮೂಲಕ ಮಾನವ ಕಳ್ಳ ಸಾಗಾಣೆ ಬಗ್ಗೆ ಜಾಗೃತಿ ಮೂಡಿಸುವ ಸಂದೇಶವನ್ನು ಪ್ರಕಟಿಸಲಾಗಿದೆ.

ಕಡತ ಸಂಖ್ಯೆ : ಹೆಚ್‌ಡಿ 26 ಪಿಸಿಕ್ಯೂ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ

ಜಿಲ್ಲೆ/ನಗರ	ಶಿಶುಗಳ ಕಳ್ಳಸಾಗಾಣಿಕೆ/ ಮಾರಾಟಕ್ಕೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ಸಂಖ್ಯೆ				ಕಳ್ಳಸಾಗಾಣಿಕೆ/ ಮಾರಾಟವಾದ ಶಿಶುಗಳ ಸಂಖ್ಯೆ				ಕಳ್ಳಸಾಗಾಣಿಕೆ/ ಮಾರಾಟದ ನಂತರ ರಕ್ಷಿಸಲ್ಪಟ್ಟ ಶಿಶುಗಳ ಸಂಖ್ಯೆ				ಬಂಧನಕ್ಕೊಳಗಾದ ಆರೋಪಿಗಳ ಸಂಖ್ಯೆ			
	2018	2019	2020	2021 (ಆಗಸ್ಟ್)	2018	2019	2020	2021 (ಆಗಸ್ಟ್)	2018	2019	2020	2021 (ಆಗಸ್ಟ್)	2018	2019	2020	2021 (ಆಗಸ್ಟ್)
ಬಾಗಲಕೋಟೆ	0	0	0	0	0	0	0	0	0	0	0	0	0	0	0	0
ಬಳ್ಳಾರಿ	0	0	0	0	0	0	0	0	0	0	0	0	0	0	0	0
ಬೆಳಗಾವಿ ನಗರ	0	0	0	0	0	0	0	0	0	0	0	0	0	0	0	0
ಬೆಳಗಾವಿ ಜಿಲ್ಲೆ	0	0	0	0	0	0	0	0	0	0	0	0	0	0	0	0
ಬೆಂಗಳೂರು ನಗರ	1	1	3	3	1	1	3	8	1	1	3	4	2	6	7	9
ಬೆಂಗಳೂರು ಜಿಲ್ಲೆ	0	0	0	0	0	0	0	0	0	0	0	0	0	0	0	0
ಬೀದರ್	0	0	0	0	0	0	0	0	0	0	0	0	0	0	0	0
ಚಾಮರಾಜನಗರ	0	0	0	0	0	0	0	0	0	0	0	0	0	0	0	0
ಚಿಕ್ಕಬಳ್ಳಾಪುರ	0	0	0	1	0	0	0	1	0	0	0	1	0	0	0	4
ಚಿಕ್ಕಮಗಳೂರು	0	0	0	0	0	0	0	0	0	0	0	0	0	0	0	0
ಚಿತ್ರದುರ್ಗ	0	0	0	0	0	0	0	0	0	0	0	0	0	0	0	0
ದಕ್ಷಿಣ ಕನ್ನಡ	0	0	0	0	0	0	0	0	0	0	0	0	0	0	0	0
ದಾವಣಗೆರೆ	0	0	2	1	0	0	2	1	0	0	2	1	0	0	14	5
ಧಾರವಾಡ	0	0	0	0	0	0	0	0	0	0	0	0	0	0	0	0
ಗದಗ	0	0	0	0	0	0	0	0	0	0	0	0	0	0	0	0
ಹಾಸನ	0	0	0	0	0	0	0	0	0	0	0	0	0	0	0	0
ಹಾವೇರಿ	0	0	0	0	0	0	0	0	0	0	0	0	0	0	0	0
ಹುಬ್ಬಳ್ಳಿ-ಧಾರವಾಡ ನಗರ	0	1	0	1	0	1	0	1	0	1	0	1	0	4	0	10
ಕೆ.ಜಿ.ಎಫ್.	0	0	0	0	0	0	0	0	0	0	0	0	0	0	0	0
ಕಲಬುರಗಿ ನಗರ	0	0	0	0	0	0	0	0	0	0	0	0	0	0	0	0
ಕಲಬುರಗಿ ಜಿಲ್ಲೆ	1	0	0	0	1	0	0	0	1	0	0	0	5	0	0	0
ಕೊಡಗು	0	0	1	0	0	0	1	0	0	0	1	0	0	0	5	0
ಕೋಲಾರ	0	0	0	0	0	0	0	0	0	0	0	0	0	0	0	0
ಕೊಪ್ಪಳ	0	1	0	0	0	1	0	0	0	1	0	0	0	2	0	0
ಮಂಡ್ಯ	0	0	0	0	0	0	0	0	0	0	0	0	0	0	0	0
ಮಂಗಳೂರು ನಗರ	0	0	1	2	0	0	1	2	0	0	0	2	0	0	0	3
ಮೈಸೂರು ನಗರ	0	0	0	0	0	0	0	0	0	0	0	0	0	0	0	0
ಮೈಸೂರು ಜಿಲ್ಲೆ	0	0	0	2	0	0	0	3	0	0	0	3	0	0	0	3
ರಾಯಚೂರು	0	1	0	0	0	1	0	0	0	1	0	0	0	2	0	0
ರಾಮನಗರ	1	0	0	1	1	0	0	1	1	0	0	1	5	0	0	7
ಶಿವಮೊಗ್ಗ	4	1	2	2	4	1	2	2	4	1	2	2	13	3	10	2
ತುಮಕೂರು	0	0	0	0	0	0	0	0	0	0	0	0	0	0	0	0
ಉಡುಪಿ	0	0	0	0	0	0	0	0	0	0	0	0	0	0	0	0
ಉತ್ತರ ಕನ್ನಡ	1	0	0	2	1	0	0	2	1	0	0	2	4	0	0	3
ವಿಜಯಪುರ	0	0	0	1	0	0	0	1	0	0	0	0	0	0	0	0
ಯಾದಗಿರಿ	0	0	0	0	0	0	0	0	0	0	0	0	0	0	0	0
ಕರ್ನಾಟಕ ರೈಲ್ವೇಸ್	0	0	0	0	0	0	0	0	0	0	0	0	0	0	0	0
Total	8	5	9	16	8	5	9	22	8	5	8	17	29	17	36	46